ಪ್ರಸ್ತುತ ಶಿಗ್ಗಾಂವ ತಾಲ್ಲೂಕಿನ ಕುನ್ನೂರು ಗ್ರಾಮದಲ್ಲಿ ದಾನಿಗಳಾದ ಮಲ್ಲಿಕಾರ್ಜುನ ಗೌಡ ಹೆಚ್. ಪಾಟೀಲ್ ಇವರು 2 ಎಕರೆ ಜಮೀನು ಕೊಟ್ಟಿರುವುದು ಅವರ ಹೆಸರನ್ನು ಸದರಿ ಕಟ್ಟಡಕ್ಕೆ ಇಡಲು ವಿನಂತಿಸಿದ್ದಾರೆ. ಎರಡು ಎಕರೆ ಜಮೀನು ಅಂದಾಜು ಮೌಲ್ಯವನ್ನು ಕಂದಾಯ ಇಲಾಖೆಯಿಂದ ಪಡೆದು ಮತ್ತು ಕಟ್ಟಡದ ಒಟ್ಟು ಅಂದಾಜು ಮೌಲ್ಯವನ್ನು ತಿಳಿದು ಎರಡುಎಕರೆ ಜಮೀನಿನ ಅಂದಾಜು ಬೆಲೆ ಹಾಗೂ ದಾನಿಗಳು ಕಟ್ಟಡ ಕಟ್ಟಲು ನೀಡಲಾದ ದಾನದ ಮೊತ್ತ ಕಟ್ಟಡದ ಅಂದಾಜು ½ ಭಾಗ ಆದ ಪಕ್ಷದಲ್ಲಿ ದಾನಿಗಳ ಹೆಸರನ್ನು ಸದರಿ ಸರ್ಕಾರಿ ಪ್ರೌಢ ಶಾಲೆಗೆ ಇಡಲು ಆದೇಶ ಹೊರಡಿಸಲಾಗುವುದು.

(ಏ) ರಾಜ್ಯ ಸರ್ಕಾರಿ ನೌಕರರ ಕ್ರೀಡಾ ತಂಡಗಳಿಗೆ ದಿನಭತ್ಯೆ ಮತ್ತು ಪ್ರವಾಸ ಭತ್ಯೆ ಮಂಜೂರು.

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಅಖಿಲಭಾರತ ಸರ್ಕಾರೀ ನೌಕರ ಕ್ರೀಡಾ ಕೂಟದಲ್ಲಿ ಭಾಗವಹಿಸುವ ರಾಜ್ಯ ಸರ್ಕಾರಿ ನೌಕರರ ಕ್ರೀಡಾ ತಂಡಗಳಿಗೆ ಹಾಗೂ ನೌಕರಿಗೆ ಹಾಲಿ ಜಾರಿಗೆ ತಂದಿರುವ ನಿಯಮಗಳಿಂದಾಗಿ ರಾಜ್ಯಸರ್ಕಾರೀ ನೌಕರ ಕ್ರೀಡಾ ತಂಡಗಳು ಭಾಗವಹಿಸಲು ಹಾಗೂ ಭಾಗವಹಿಸುವಂಥ ನೌಕರರಿಗೆ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಮಂಜೂರುಮಾಡಲು ತೊಂದರೆಯಾಗಿದೆ. ಈ ಬಗ್ಗೆ ರಾಜ್ಯಸರ್ಕಾರೀ ನೌಕರರ ಸಂಘ ಯುವ ಜನ ಸೇವಾ ಮತ್ತು ಕ್ರೀಡಾ : ನಿರ್ದೇಶನಾಲಯದಿಂದ ಹಾಗೂ ನೌಕರರಿಂದ ಹಲವಾರು ಮನವಿಗಳನ್ನು ಸಲ್ಲಿಸಿ ಹಾಲಿ ಜಾರಿಯಲ್ಲಿರುವ ನಿಯಮವನ್ನು ರದ್ದುಗೊಳಿಸಿ ಈ ಹಿಂದೆ ಇದ್ದಂಥ ನಿಯಮವನ್ನೇ ಜಾರಿಗೊಳಿಸಬೇಕೆಂದು ಕೋರಲಾಗಿದ್ದರೂ ಸಹ ಇದುವರೆವಿಗೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದಾಗಿ ತಾಲ್ಲೂಕು, ಜಿಲ್ಲಾ ವಿಭಾಗ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜಯಿಯಾದ ಕ್ರೀಡಾ ತಂಡಗಳಿಗೆ ಹಾಗೂ ನೌಕರರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಆಜಯಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಸರ್ಕಾರೀ ಆದೇಶ ಸಂಖ್ಯೆ:ಎಫ್‌ಡಿ 13 ಎಸಆರಎಸ್ 94 ದಿನಾಂಕ 16-12-94 ರಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಮತ್ತು ಒಲಂಪಿಕ್ ಸಂಸ್ಥೆಯವರು ನಡೆಸುವ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ಮಾತ್ರ ದಿನಭತ್ಯೆ ಮತ್ತು ಪ್ರವಾಸ ಭತ್ಯೆ ಮತ್ತು ಇತರೆ ಸವಲತ್ತುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಅಖಿಲ ಭಾರತ ನಾಗರೀಕ ಸೇವಾ ಸಂಸ್ಕೃತಿ ಮತ್ತು ಕ್ರೀಡಾ ಮಂಡಲಿ ನಡೆಸುವ ರಾಷ್ಟ್ರೀಯ ಮಟ್ಟದ ಸರ್ಕಾರೀ ನೌಕರರ ಕ್ರೀಡಾ ಕೂಡ, ರಾಷ್ಟ್ರೀಯ ಮಹತ್ವದ ಕ್ರೀಡಾ ಕೂಟಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಇದರಿಂದಾಗಿ ಈ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಒದಗಿಸುವ ಅವಕಾಶವಿರುವುದಿಲ್ಲ. ಸರ್ಕಾರಿ ನೌಕರರಿಗೆ ಆಗುವ ತೊಂದರೆಗಳನ್ನು ಸರಿಪಡಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡಲು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.